**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1719/2022**

| | | | |
|---|---|---|---|
| **ಹೆಸರು** | : | **ರುಕ್ಸಾನಾ** | ಚಾ.ಸಾ. 4 |
| **ಗಂಡನ ಹೆಸರು** | : | **ಮದರಸಾಬ** | ಪ್ರಾ.ಸಾ. 3 |
| **ವಯಸ್ಸು** | : | **32 ವರ್ಷ** | ದಿನಾಂಕಃ 16-04-2025 |
| **ಉದ್ಯೋಗ** | : | **ಗಸ್ತು ಅರಣ್ಯಪಾಲಕ** | |
| **ವಾಸಸ್ಥಳ** | : | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2013 ರಿಂದ 2023 ರವರೆಗೆ ವೆಂಕಟಾಪುರ ಗಸ್ತು ಅರಣ್ಯ ರಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 17-11-2019 ರಂದು ಪ್ರಾಸಾ 1 ರವರು ಕರೆದು ತಿಳಿಸಿದ್ದೇನೆಂದರೆ, ಜಿಂಕೆ ಮಾಂಸವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದಾರೆ. ಆದ್ದರಿಂದ ನಮ್ಮ ಸಿಬ್ಬಂದಿಗಳಲ್ಲಿ ಎರಡು ತಂಡ ಮಾಡಿಕೊಂಡು ಅವುಗಳಲ್ಲಿ ಒಂದು ತಂಡದಲ್ಲಿ ಪ್ರಾ ಸಾ 1, 2 ಹಾಗೂ ಚಾಸಾ 3 ರವರು ಇರುತ್ತಾರೆ ಮತ್ತು ಇನ್ನೊಂದು ತಂಡದಲ್ಲಿ ನಾನು, ಚಾಸಾ 5 ಮತ್ತು 6 ರವರು ಇರುತ್ತೇವೆ. ನಾವು ಮೊಂಬಾಪುರ ಹಾಗೂ ಲಕ್ಷ್ಮಾ ಸಾಗರ ಅರಣ ಪ್ರದೇಶದಲಿ ಹುಡುಕಾಟ ಪ್ರಾರಂಭಿಸಿದಾಗ ನಮ್ಮ ಇನ್ನೊಂದು ತಂಡ ಹೋಗುವ ಮಾರ್ಗದಲ್ಲಿ ಅಂದಾಜು 50 ಮೀಟರ ಅಂತರದಲ್ಲಿ ಒಬ್ಬ ವ್ಯಕ್ತಿ ಬರತ್ತಿರುವುದನ್ನು ನೋಡಿರುತ್ತಾರೆ. ಸದರಿ ವ್ಯಕ್ತಿ ನಮ್ಮ ಸಿಬ್ಬಂದಿಯರನ್ನು ನೋಡಿದ ತಕ್ಷಣ ಅವನ ಹತ್ತಿರ ಇದ್ದ ಚೀಲವನ್ನು ಬಿಸಾಕಿ ಅರಣ್ಯ ಪ್ರದೇಶದಲ್ಲಿ ಓಡಿ ಹೋಗಿರುತ್ತಾನೆ. ಆಗ ಅದಕಾರಿಗಳು ನಮಗೆ ಕರೆಮಾಡಿ ಸ್ಥಳಕ್ಕೆ ಬರಲು ಸೂಚಿಸಿದಾಗ ನಾವು ಅಲ್ಲಿ ಹೋಗಿರುತ್ತೇವೆ.

ಅಧಿಕಾರಿಗಳು ಆ ವ್ಯಕ್ತಿಯ ಬಿಸಾಕಿದ ಪ್ಲಾಸ್ಟಿಕ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಚಿಪ್ಪು ಹಂದಿ (Pangolin) ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ವ್ಯಕ್ತಿಯ ವಿರುದ್ದ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಂಡಿರುತ್ತೇವೆ. ಓಡಿ ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲುರ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.) ಸದರಿ ಸ್ಥಳದಲ್ಲಿ ಒಂದು ಬಡಿಗೆ ಸಹ ಇರುವುದು ಕಂಡುಬಂದಿರುತ್ತದೆ. ಅಲ್ಲಿ ಬಿಸಾಕಿರುವ ಚೀಲ ಮತ್ತು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದಿ ಚೀಲ ಮತ್ತು ಬಡಿಗೆಯನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ 1 ರಲ್ಲಿರುವ ಪ್ರಾಣಿ ಆ ದಿನ ನಮಗೆ ಚೀಲದಲ್ಲಿ ಸಿಕ್ಕಿರುತ್ತದೆ. ಸ್ಥಳದಲ್ಲಿ

ಪ್ರಾಸಾ 1 ರವರು ಘಟನೆ ಬಗ್ಗೆ ಮಹಜರನ್ನು ತಯಾರಿಸಿರುತ್ತಾರೆ. ಸದರಿ ಮಹಜರ ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ. ಈ ರೀತಿ ಚಾಸಾ 8 ರವರಿಗೆ ಹೇಳಿಕೆಯನ್ನು ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ B.S. ವಕೀಲರಿಂದಃ**

ದಿನಾಂಕಃ 22-02-2019 ರಂದು ನಾನು ಹೇಳಿಕೆಯನ್ನು ನೀಡಿದ್ದೇನೆ. ನನ್ನ ಹೇಳಿಕೆಯ ಸಂಗತಿಗಳನ್ನು ಓದಿದ ನಂತರ ಸಹಿ ಮಾಡಿದ್ದೇನೆ. ನನ್ನ ಹೇಳಿಕೆಯಲ್ಲಿ ದಿನಾಂಕ ನಮೂದು ಇರುವ ಬಗ್ಗೆ ನಾನು ಗಮನಿಸಿಲ್ಲ. ಸಾಕ್ಷಿಗೆ ತಾವು ನೀಡಿರುವ ಹೇಳಿಕಯನ್ನು ತೋರಿಸಿ ಕೇಳಿದಾಗ ಅದರಲ್ಲಿ ದಿನಾಂಕ ನಮೂದು ಇಲ್ಲ ಎಂದು ತಿಳಿಸಿರುತ್ತಾರೆ. ಸದರಿ ಹೇಳಿಕೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ನಾನು ದಿನಾಂಕಃ 22-02-2019 ರಂದು ಹೇಳಿಕೆ ನೀಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

ಆರೋಪಿ 2-3 ಪ್ರಕರಣಗಳನ್ನು ದಾಖಲಿಸಿ ಯಾವುದಾದರೂ ಪ್ರಕರಣದಲ್ಲಿ ಹೇಳಿಕೆ ಸೇರಿಸಬಹುದು ಎಂದು ಈ ರೀತಿ ನಿಡಿ 1 ರ ದಾಖಲೆಯನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಎಷ್ಟು ಪ್ರಕರಣಗಳು ದಾಖಲಾಗಿದೆ ಎಂದು ನನಗೆ ಮಾಹಿತಿ ಇಲ್ಲ.

ಕುಂಚಾವರಂ ಗ್ರಾಮದಲ್ಲಿ ನೈಕಿ ನಾರಾಯಣ ರವರು ನನಗೆ ಪರಿಚಯ ಇಲ್ಲ. ಆರೋಪಿ ನೈಕಿ ನಾರಾಯಣ ರವರ ಹತ್ತಿರ ಕೆಲಸ ಮಾಡುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೈಕಿ ನಾರಾಯಣ ರವರ ಜಮೀನು ಅರಣ್ಯ ಪ್ರದೇಶಕೆ ಹತಿಕೊಂಡು ಇದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನೈಕಿ ನಾರಾಯಣ ರವರ ಜಮೀನಿಗೆ ಹೋಗಬೇಕಾದರೆ ಅರಣ್ಯ ಪ್ರದೇಶದ ಮುಖಾಂತರ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ರೈತರ ಜಮೀನುಗಳಲ್ಲಿ ಪ್ರಾಣಿಗಳು ಹಾನಿ ಮಾಡಿದರೆ ಅದನ್ನು ಅರಣ್ಯ ಇಲಾಖೆ ಭರಿಸಬೇಕಾಗುತ್ತದೆ ಎಂದರೆ ಸಾಕ್ಷಿ ಕೆಲವೂಂದು ಪ್ರಾಣಿಗಳಿಗೆ ಮಾತ್ರ ಅನ್ವಯ ವಾಗುತ್ತದೆ ಎಂದರೆ ಸರಿ. ಅರಣ್ಯ ಪ್ರದೇಶ ಸುತ್ತಲೂ ತಂತಿ ಬೇಲಿ ಹಾಕಬೇಕು ಎಂದು ಸರ್ಕಾರದ ಆದೇಶವಿದೆ ಎಂದರೆ ಸಾಕ್ಷಿ ಎಲ್ಲಾ ಕಡೆ ಹಾಕಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. 2013 ರಿಂದ ಚಿಂಚೋಳಿ ಅರಣ್ಯ ಪ್ರದೇಶ ಕಾಯ್ದಿರಿತ ಪ್ರದೇಶ ಎಂದು ಘೋಷಣೆ ಆಗಿದೆ ಆದ್ದರಿಂದ ತಂತಿ ಬೇಲಿ ಹಾಕಬೇಕು ಎಂದು ಸರ್ಕಾರದಿಂದ ಹಣ ಬಿಡುಗಡೆ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಂಚೋಳಿ ಅರಣ್ಯ ಪ್ರದೇಶದ 10 ಕಿ.ಮಿ. ಸುತ್ತಳತೆಯಲ್ಲಿ ಗಣಿಗಾರಿಕೆ ಮಾಡಬಾರದೆಂದು ಆದೇಶ ಇದೆ ಎಂದರೆ ಸಾಕ್ಷಿ ಇರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಾನೂನುಗಳು ಕಾಡುಪ್ರಾಣಿಗಳಿಗೆ ಸಂರಕ್ಷಣೆ ಮಾಡುವಗೋಸ್ಕರ ಮಾಡಲಾಗಿದೆ ಎಂದರೆ ಸರಿ.

ನಾನು 2016 ರಿಂದ ಕುಂಚಾವರಂನಲ್ಲಿದ್ದ ಕಾರಣ ಆರೋಪಿಗೆ ನಾನು ವಿಶೇಷವಾಗಿ ಗುರುತಿಸಬಹುದು ಎಂದರೆ ಸಾಕ್ಷಿ ಪ್ರಕರಣ ದಾಖಲಾದ ನಂತರದಿಂದ ಆರೋಪಿಗೆ ಗುರುತಿಸಬಹುದು ಎಂದು ನುಡಿಯುತ್ತಾರೆ.

ಆರೋಪಿ ಹಾಗೂ ನೈಕಿ ನಾರಾಯಣ ರವರು ತಮ್ಮ ಜಮೀನಿನಲಿ ಕಾಡು ಪ್ರಾಣಿಗಳು ಬೆಳೆ ಹಾನಿ ಮಾಡಿದ್ದು ಪರಿಹಾರ ಸಲುವಾಗಿ ನಮ್ಮ ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಸದರಿ ದೂರು ಸಲ್ಲಿಸುವ ಮೊದಲಿನಿಂದ ನನಗೆ ಪರಿಚಯ ಎಂದರೆ ಸರಿಯಲ್ಲ.

ಸದರಿ ಅರ್ಜಿ ಸಲ್ಲಿಸಿದ ಕಾರಣ ಆರೋಪಿ ವಿರುದ್ದ ಸುಳು ಆರೋಪಿ ಮಾಡಿ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಕಚೇರಿಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿರುವ ಪ್ರಾಣಿ ಮು.ಮಾ. 1 ರ ಚೀಲದಲ್ಲಿ ಸೇರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಾಗಲೀ ಅಥವಾ ಪಂಚನಾಮೆಯಲ್ಲಾಗಲಿ ಮು.ಮಾ. 2 ರ ಬಡಿಗೆಯ ಉದ್ದ ಮತ್ತು ಅಳತೆ ನಮೂದಿಸಿಲ್ಲ ಎಂದರೆ ಸರಿ. ಆದ್ದರಿಂದ ಮು.ಮಾ. 2 ರ ಬಡಿಗೆ ಅಲ್ಲಿ ಸಿಕ್ಕಿರುವುವ ಬಡಿಗೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸತಾಯಿಸಲು ಮತ್ತು ಆರೋಪಿಗೆ ನಷ್ಟ ಪರಿಹಾರ ಕೊಡಬೇಕಾಗುತ್ತದೆ ಎಂದು ತಿಳಿದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಹಾಗೂ ಮುದ್ದೆಮಾಲಿಗೂ ಮತ್ತು ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆರೋಪಿಗೆ ಸತಾಯಿಸಲು ದಿನಾಂಕ ಇಲ್ಲದಿರುವ ಹೇಳಿಕೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪು ಮಾಡದೇ ಇದ್ದರೂ ಸಹ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**